ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	280
2. ಸದಸ್ಯರ ಹೆಸರು	:	ಡಾ॥ ವೈ.ಎ. ನಾರಾಯಣಸ್ವಾಮಿ
3. ಉತ್ತರಿಸಬೇಕಾದ ದಿನಾಂಕ	:	14.09.2021
4. ಉತ್ತರಿಸುವ ಸಚಿವರು	:	ಸಹಕಾರ ಸಚಿವರು

***

ಕ್ರಸಂ	ಪ್ರಶ್ನೆ	ಉತ್ತರ
ಅ	ಕಳೆದ 2 ವರ್ಷಗಳಲ್ಲಿ ಶ್ರೀನಿವಾಸಪುರ ಎ.ಪಿ.ಎಂ.ಸಿ.ಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಮೊತ್ತ ಎಷ್ಟು;	ಕಳೆದ 2 ವರ್ಷಗಳಲ್ಲಿ ಶ್ರೀನಿವಾಸಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ)ಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಒಟ್ಟಾರೆ ರೂ.123.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
ಆ	ಈ ಮೊತ್ತವನ್ನು ಯಾವ ಕಾಮಗಾರಿಗಳಿಗಾಗಿ ಉಪಯೋಗಿಸಲಾಗುತ್ತಿದೆ; (ವಿವರ ನೀಡುವುದು)	ಈ ಮೊತ್ತವನ್ನು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 2 ಮುಚ್ಚು ಹರಾಜುಕಟ್ಟೆಗಳನ್ನು ರೂ.38.00 ಲಕ್ಷಗಳ ವೆಚ್ಚದಲ್ಲಿ, ಸಮಿತಿ ವ್ಯಾಪ್ತಿಯ ವಳಗೇರಹಳ್ಳಿ ಗ್ರಾಮೀಣ ಸಂತೆಯಲ್ಲಿ ಮುಚ್ಚು ಹರಾಜುಕಟ್ಟೆಯನ್ನು ರೂ.18.00 ಲಕ್ಷಗಳ ವೆಚ್ಚದಲ್ಲಿ ಮತ್ತು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆಂತರಿಕ ರಸ್ತೆ ಮತ್ತು ಚರಂಡಿಯ ಕಾಮಗಾರಿಯನ್ನು ರೂ.69.48 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.
ಇ	ಮೂಲಭೂತ ಸೌಕರ್ಯಗಳಿಗಾಗಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ;	2020–21ನೇ ಸಾಲಿನ ನಬಾರ್ಡ್‌ನ ಡಬ್ಲ್ಯೂ.ಐ.ಎಫ್ 2014–15ರ ಯೋಜನೆಯಡಿ ರೂ.451.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶ್ರೀನಿವಾಸಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.
ಈ	ಹಾಗಿದ್ದಲ್ಲಿ, ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು ?	ಮೇಲಿನ ಕಾಮಗಾರಿಗೆ ದಿನಾಂಕ:14.07.2021ರಂದು 06 ತಿಂಗಳ ಕಾಲಮಿತಿ ನೀಡಿ ಕಾರ್ಯಾದೇಶ ನೀಡಲಾಗಿದೆ. ದಿನಾಂಕ:14.01.2022ರ ಒಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಸಂಖ್ಯೆ:ಸಿಒ 244 ಎಂಆರ್‌ಇ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು